ವಿಯೆಟ್ನಾಮ್ ದೇಶದ ದಕ್ಷಿಣದಲ್ಲಿರುವ ಅತಿ ದೊಡ್ಡ ನಗರ ಸೈಗಾನ್. ದೀರ್ಘಾವಧಿ ಯುದ್ಧದ ನಂತರ ಉತ್ತರ ಮತ್ತು ದಕ್ಷಿಣ ವಿಯೆಟ್ನಾಮ್ ಒಗ್ಗೂಡಿದ ಮೇಲೆ ಈ ಸೈಗಾನ್ ನಗರಕ್ಕೆ ಆ ದೇಶದ ರಾಷ್ಟ್ರಪಿತ 'ಹೋ ಚಿ ಮಿನ್' ಹೆಸರಿಡಲಾಯಿತು. ಸ್ಥಳೀಯರು ಸೈಗಾನ್ ಎಂದೇ ಕರೆಯುತ್ತಾರೆ.

ಬೆಂಗಳೂರು ಮೂಲದ 'ಸುಭಾಷ್' ಎನ್ನುವವರು ಸೈಗಾನ್‌ನಲ್ಲಿ 'ತಂದೂರ್' ಹೆಸರಿನ ಎರಡು ಹೋಟೆಲ್ ಹೊಂದಿದ್ದಾರೆ. 1997ರಲ್ಲಿ ವಿಯೆಟ್ನಾಮ್‌ಗೆ ಹೋದ ಸುಭಾಷ್, ವಿಯೆಟ್ನಾಮಿ ಹೆಣ್ಣುಮಗಳನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದ್ದಾರೆ. ನಾವು ಅವರ ಹೋಟೆಲ್‌ಗೆ ಊಟಕ್ಕೆ ಹೋದಾಗ ಸುಭಾಷ್ ಅವರ ಪತ್ನಿ ತಾವೋ ಅವರನ್ನು ಭೇಟಿ ಆದೆವು.

'ನಿಮ್ಮ ಸೈಗಾನ್‌ಗೂ ಸುಭಾಷ್‌ಗೂ ಕರುಳಬಳ್ಳಿಯ ಸಂಬಂಧವಿದೆ' ಎಂದು ಅವರಿಗೆ ಹೇಳಿದೆ. ಅವರಿಗೆ ಅರ್ಥವಾಗಲಿಲ್ಲ. ಆಗ, 'ನೀವು ಮದುವೆಯಾಗಿರುವುದು ಸುಭಾಷ್ ಎನ್ನುವವರನ್ನು. ನಾವುಗಳು ಪ್ರೀತಿಯಿಂದ ನೇತಾಜಿ ಎಂದು ಕರೆಯುವ ನಮ್ಮ ದೇಶದ ಕಣ್ಮಣಿಗಳಲ್ಲೊಬ್ಬರಾದ ಸುಭಾಷ್ ಚಂದ್ರ ಬೋಸ್ ಎಂಬ ಸ್ವಾತಂತ್ರ್ಯ ಹೋರಾಟಗಾರ 1945ರಲ್ಲಿ ಕಣ್ಮರೆಯಾದದ್ದು ನಿಮ್ಮ ಸೈಗಾನ್‌ನಲ್ಲಿಯೇ. '76 ರೂ ಪೌಲ್ ಬ್ಲಾಂಚೆ'ಯ (ಈಗಿನ ಹಾಯ್ ಭಾ ಟ್ರುಂಗ್ ರಸ್ತೆಯ) ಹಳೆಯ ಬಂಗಲೆಯಲ್ಲಿ ಅವರ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಕೇಂದ್ರ ಕಚೇರಿಯಿತ್ತು' ಎಂದು ವಿವರಿಸಿದೆ.

ತಕ್ಷಣ ಅವರು, 'ಆ ರಸ್ತೆ ನಮ್ಮ ಇನ್ನೊಂದು ಹೋಟೆಲ್‌ಗೆ ಬಹಳ ಹತ್ತಿರವಿದೆ. ಆ ಕಟ್ಟಡದ ಮುಂದಿನ ಜಾಗದಲ್ಲಿ ಬೀದಿ ಬದಿ ವ್ಯಾಪಾರಿಗಳ ಅಂಗಡಿಗಳಿವೆ. ಹಾಗಾಗಿ ಆ ಕಟ್ಟಡ ಸರಿಯಾಗಿ ಕಾಣುವುದಿಲ್ಲ. ನಿಮಗೆ ಬೇಕಿದ್ದರೆ ಅದರ ಫೋಟೊ ತೆಗೆದು ಕಳಿಸುವೆ' ಎಂದು ಹೇಳಿದರು.



ನೇತಾಜಿ 1945ರ ಆಗಸ್ಟ್ 17ರಂದು ಸೈಗಾನ್‌ಗೆ ಬಂದಾಗಿನ ಚಿತ್ರ



### ಆಗ್ನೇಯ ಏಷ್ಯಾ ದೇಶಗಳಲ್ಲಿ ಭಾರತೀಯರು

ಭಾರತ ಮತ್ತು ಆಗ್ನೇಯ ಏಷ್ಯಾ ದೇಶಗಳ ಸಂಬಂಧ ಸುಮಾರು 2000 ವರ್ಷಗಳಿಗೂ ಮೀರಿದ್ದು. ಭಾರತದ ಹಿಂದೂಧರ್ಮ ಮತ್ತು ಬೌದ್ಧಧರ್ಮ ಅಲ್ಲಿನವರ ಬದುಕಿನ ಭಾಗವಾಗಿದೆ. ದಕ್ಷಿಣ ಭಾರತದಿಂದ ವ್ಯಾಪಾರಿ ಹಡಗುಗಳು ಈ ದೇಶಗಳಿಗೆ ತುಂಬಾ ಹಿಂದಿನಿಂದಲೂ ಹೋಗಿ ಬರುತ್ತಿದ್ದವು. ಯೂರೋಪಿಯನ್ನರ ಪ್ರವೇಶದಿಂದ ದಕ್ಷಿಣ ಭಾರತದೊಂದಿಗೆ ಈ ದೇಶಗಳಿಗಿದ್ದ ವ್ಯಾಪಾರಿ ಸಂಬಂಧ ಕೊನೆಗೊಂಡಿತು.

ಬ್ರಿಟಿಷರು ಭಾರತ, ಬರ್ಮಾ ಮತ್ತು ಮಲಯಾವನ್ನು 18–19ನೇ ಶತಮಾನದಲ್ಲಿ ತಮ್ಮ ವಶಕ್ಕೆ ತೆಗೆದುಕೊಂಡು ವಸಾಹತು ಮಾಡಿಕೊಂಡರೆ, ಡಚ್ಚರು ಇಂಡೊನೇಷ್ಯಾವನ್ನು ಮತ್ತು ಫ್ರೆಂಚರು ಇಂಡೊ–ಚೀನಾ ದೇಶಗಳನ್ನು ತಮ್ಮ ವಸಾಹತು ಮಾಡಿಕೊಂಡರು.

ಪೂರ್ವ ಏಷ್ಯಾ ದೇಶಗಳಲ್ಲಿ 1940ರಲ್ಲಿ ಸುಮಾರು 20ರಿಂದ 30 ಲಕ್ಷ ಭಾರತೀಯರು ವಾಸಿಸುತ್ತಿದ್ದರು. ಫ್ರೆಂಚ್ ಆಡಳಿತದ ಇಂಡೊ–ಚೀನಾ ಪ್ರದೇಶವು ಟೊಂಕಿನ್ (ವಿಯೆಟ್ನಾಮ್ ಉತ್ತರಭಾಗ), ಅನ್ನಮ್ (ವಿಯೆಟ್ನಾಮ್ ಮಧ್ಯಭಾಗ), ಕೊಚಿನ್ ಚೀನಾ (ವಿಯೆಟ್ನಾಮ್ ದಕ್ಷಿಣಭಾಗ), ಕಾಂಬೋಡಿಯಾ ಮತ್ತು ಲಾವೋಸ್ ಅನ್ನು ಒಳಗೊಂಡಿತ್ತು. ಫ್ರೆಂಚ್ ಗವರ್ನರ್ ಜನರಲ್ ಹನಾಯ್ ನಗರದಲ್ಲಿ ತನ್ನ ಮುಖ್ಯ ಕಚೇರಿಯನ್ನು ಹೊಂದಿದ್ದರು. ಕೊಚಿನ್ ಚೀನಾ ಪ್ರದೇಶದ ರಾಜಧಾನಿ ಸೈಗಾನ್ ನಗರವಾಗಿತ್ತು.

ಭಾರತದ ಫ್ರೆಂಚ್ ವಸಾಹತು ಪ್ರದೇಶಗಳಾದ ಪಾಂಡಿಚೇರಿ, ಕರೈಕಾಲ್ ಮತ್ತು ಮಾಹೇಗಳಿಂದ ಹಲವಾರು ಮಂದಿ ಉದ್ಯೋಗ ಮತ್ತು ವ್ಯಾಪಾರದ ಅವಕಾಶಗಳನ್ನು ಅರಸುತ್ತಾ ಫ್ರೆಂಚ್ ಇಂಡೊ–ಚೀನಾಗೆ ವಲಸೆ ಹೋದರು. 1945–46ರಲ್ಲಿ ಫ್ರೆಂಚ್ ಇಂಡೋಚೀನಾದಲ್ಲಿದ್ದ ಭಾರತೀಯರ ಸಂಖ್ಯೆ 6,000. ಅವರಲ್ಲಿ ಬಹಳಷ್ಟು ಮಂದಿ ತಾವು ಅಲ್ಲಿ ದುಡಿದು, ಭಾರತದಲ್ಲಿನ ತಮ್ಮ ಕುಟುಂಬಗಳಿಗೆ ಹಣ ಕಳಿಸುತ್ತಿದ್ದರು.

ಆಗಿನ ಸೈಗಾನ್ ನಗರದಲ್ಲಿ ಚೆಟ್ಟಿಯಾರ್ ಸಂಘ, ಹಿಂದೂ ತಮಿಳ್ ಜನಸಂಘ, ತಮಿಳು ಮುಸ್ಲಿಂ ಸಂಘ, ಸಿಂಧಿ ರೇಷ್ಮೆ ವ್ಯಾಪಾರಿಗಳ ಸಂಘ, ಪಠಾಣರ ಸಂಘ, ಸಿಖ್ಖರ ಸಂಘಗಳಿದ್ದವು. ಪಾಂಡಿಚೇರಿ ಮೂಲದ ಪ್ರೌಚಂಡಿ ಮತ್ತು ಕೊಂಡಪ್ಪ ಕುಟುಂಬದವರು ಜಮೀನ್ದಾರರಾಗಿ ಬೆಳೆದಿದ್ದರು. ಕೊಚಿನ್ ಚೀನಾದಲ್ಲಿದ್ದ ನಾಟ್ಟುಕೊಟ್ಟೈ ಚೆಟ್ಟಿಯಾರ್‌ಗಳು ಲೇವಾದೇವಿ ವ್ಯವಹಾರ ಮಾಡುತ್ತಾ ಆರ್ಥಿಕವಾಗಿ ಸದೃಢರಾಗಿದ್ದರು. ಅವರದ್ದೇ ಸಂಘವಿದ್ದ ಚೆಟ್ಟಿಯಾರ್‌ಗಳು ಸೈಗಾನ್‌ನಲ್ಲಿ ಮಾರಿಯಮ್ಮ ದೇವಸ್ಥಾನವನ್ನು ಕಟ್ಟಿಸಿದ್ದರು. ತಮಿಳು ಮುಸ್ಲಿಮರು ಮತ್ತು ಸಿಂಧಿಗಳು ಜವಳಿ, ರೇಷ್ಮೆ, ವಜ್ರದ ವ್ಯಾಪಾರ ಮಾಡುತ್ತಿದ್ದರು.